# ಶಾಂಕರ ಭಾಷ್ಯಾನುಸಾರಿ ಚತುಸ್ಸೂತ್ರೀವಿವರಣಮ್

(ಶಂಕರಭಾಷ್ಯದಲ್ಲಿರುವಂತೆ ಚತುಸ್ಸೂತ್ರಗಳ ವಿವರಣೆ)

ಸ್ವಾಮಿ ಹರ್ಷಾನಂದ

ವೇದಾಂತದ ವಿಚಾರಗಳನ್ನು ಸೂತ್ರಗಳಲ್ಲಿ ವಿವರಿಸುವ ಬ್ರಹ್ಮ ಸೂತ್ರಗಳ ಮೊದಲ ನಾಲ್ಕು ಸೂತ್ರಗಳಲ್ಲಿ ಬಹಳಷ್ಟು ತತ್ತ್ವ ಅಡಗಿದೆ. ಈ ನಾಲ್ಕು ಸೂತ್ರಗಳ ಅಧ್ಯಯನವು ವೇದಾಂತಕ್ಕೆ ಕಿರುಗನ್ನಡಿಯನ್ನು ಹಿಡಿದಂತೆ. ತಾವೇ ಬರೆದಿರುವ ಸೂತ್ರಗಳ ಸಂಸ್ಕೃತ ವ್ಯಾಖ್ಯಾನಕ್ಕೆ ಸರಳವಾದ ಕನ್ನಡದಲ್ಲಿ ಲೇಖಕರು ಅರ್ಥ ವನ್ನು ವಿವರಿಸಿದ್ದಾರೆ. ಪೂಜ್ಯರು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರು ಹಾಗೂ ಶಾಸ್ತ್ರಗಳಲ್ಲಿ ಆಳವಾದ ಪಾಂಡಿತ್ಯವುಳ್ಳವರು.

## ೧. ಜಿಜ್ಞಾಸಾಧಿಕರಣಮ್

**ಆತ್ಯಂತಿಕದುಃಖನಿವೃತ್ತಿಃ ಪರಮಸುಖಪ್ರಾಪ್ತಿಶ್ಚ ಸರ್ವಪ್ರಾಣಿಭಿರಿಷ್ಯತೇ ಸದಾ । ತೇ ತು ವಿನಾ ಮೋಕ್ಷಂ ನ ಸಿಧ್ಯತಃ । ಮೋಕ್ಷಸ್ತು ಬ್ರಹ್ಮಾತ್ಮೈಕ್ಯಜ್ಞಾನಾದೇವ ಭವತಿ॥**

ಎಲ್ಲ ಜೀವಿಗಳೂ ಸದಾಕಾಲವೂ ಬಯಸುವುದು ಇದನ್ನೇ: (ನಮ್ಮ) ದುಃಖವು ಸಂಪೂರ್ಣವಾಗಿ ಕೊನೆಗೊಳ್ಳಲಿ; (ನಮಗೆ) ಪರಮಾನಂದವು ದೊರಕಲಿ! ಇವಾದರೋ ಮೋಕ್ಷ ವನ್ನು ಪಡೆಯದೆ ಸಿದ್ಧಿಸವು. ಆದರೆ ಮೋಕ್ಷವು ಪ್ರತ್ಯಗಾತ್ಮನೂ ಬ್ರಹ್ಮವೂ ಒಂದೇ ಎಂಬ ಜ್ಞಾನದಿಂದಲೇ ಪ್ರಾಪ್ತವಾಗುತ್ತದೆ.

**ಚೇತನಾಚೇತನಯುಕ್ತಮಿದಂ ವಿಚಿತ್ರಂ ಜಗತ್ ಯಸ್ಮಾತ್ಪರವಸ್ತುನೋ ಜಾಯತೇ, ಜನ್ಮನೋಽನಂತರಮಪಿ ಯಸ್ಮಿನ್ನೇವ ತಿಷ್ಠತಿ, ಅಂತೇ ಚ ಯದೇವ ಪ್ರವಿಶತಿ ತದೇವ ಪರವಸ್ತು ಬ್ರಹ್ಮ ॥**

ಚೇತನ ಅಚೇತನ ವಸ್ತುಗಳನ್ನೊಳಗೊಂಡು ಬಹುರೂಪ ವಾಗಿರುವ ಈ ಪ್ರಪಂಚವು ಯಾವ ಪರವಸ್ತುವಿನಿಂದ ಹುಟ್ಟಿರು ವುದೋ, ಹುಟ್ಟಿದನಂತರವೂ ಯಾವುದರಲ್ಲಿಯೇ ನೆಲೆನಿಂತಿರು ವುದೋ ಮತ್ತು ಕೊನೆಯಲ್ಲಿ (ಪ್ರಳಯಕಾಲದಲ್ಲಿ) ಯಾವು ದನ್ನೇ ಪ್ರವೇಶಿಸುವುದೋ ಅದೇ ಪರವಸ್ತುವಾದ ಬ್ರಹ್ಮ.

**ಆತ್ಮಾ ತು ಅಸ್ಮಾಕಂ ನಿಜಸ್ವರೂಪಮ್ । ತತ್ತು ದೇಹೇಂದ್ರಿಯಮನಆದಿಭ್ಯೋ ವ್ಯತಿರಿಕ್ತಂ ಚಿದ್ರೂಪಮ್। ತದೇವ ಬ್ರಹ್ಮ ॥**

ಆತ್ಮವಸ್ತುವಾದರೋ ನಮ್ಮ ನಿಜಸ್ವರೂಪವೇ. ಅದು ದೇಹ, ಇಂದ್ರಿಯಗಳು, ಮನಸ್ಸು ಮೊದಲಾದವುಗಳಿಗಿಂತ ಭಿನ್ನವೂ ಚೈತನ್ಯರೂಪವೂ ಆದುದು. ಅದೇ ಬ್ರಹ್ಮ.

**ಅವಿದ್ಯಯಾ ಅಸ್ಮಾಕಂ ನಿಜಸ್ವರೂಪಂ ವಿಸ್ಮೃತಮ್ । ಅಜ್ಞಾನೇನ ಯಥಾ ರಜ್ಜ್ವಾಂ ಸರ್ಪಃ ಅಧ್ಯಸ್ತಃ ತಥಾ ಚಿದಾತ್ಮನಿ ದೇಹತ್ವಾದಿ ಅಧ್ಯಸ್ತಮ್ । ರಜ್ಜುಜ್ಞಾನೇನ ಸರ್ಪಭ್ರಾಂತಿಃ ಯಥಾ ನಿವರ್ತ್ಯತೇ ತಥಾ ಆತ್ಮಜ್ಞಾನೇನ ದೇಹಾದ್ಯಾತ್ಮಭಾವಃ ಸಕಲದುಃಖಾಶ್ರಯೋ ನಿವರ್ತ್ಯತೇ। ಸ ಏವ ಮೋಕ್ಷಃ ॥**

ಅವಿದ್ಯೆಯಿಂದ (ಅಥವಾ ಅಜ್ಞಾನದಿಂದ) ನಮ್ಮ ನಿಜ ಸ್ವರೂಪವು ಮರೆತುಹೋಗಿದೆ. ಅಜ್ಞಾನದಿಂದ ಹಗ್ಗದಲ್ಲಿ ಹೇಗೆ ಹಾವನ್ನು ನೋಡುತ್ತೇವೆಯೋ ಹಾಗೆಯೇ ಚಿದ್ರೂಪನಾದ ಆತ್ಮನಲ್ಲಿ ದೇಹತ್ವವೇ ಮೊದಲಾದುವನ್ನು ಕಲ್ಪಿಸಿಕೊಂಡಿದ್ದೇವೆ. ಹಗ್ಗದ (ನಿಜವಾದ) ಜ್ಞಾನದಿಂದ ಅದು ಹಾವೆಂಬ ಭ್ರಾಂತಿಯು ಹೇಗೆ ಹೋಗಿಬಿಡುವುದೋ ಹಾಗೆಯೇ ಎಲ್ಲ ದುಃಖಗಳಿಗೂ ಆಶ್ರಯವಾದ ದೇಹವೇ ಆತ್ಮವೆಂಬ ಭಾವನೆಯು ಆತ್ಮಜ್ಞಾನ ದಿಂದ ಹೋಗಿಬಿಡುತ್ತದೆ. ಅದೇ ಮೋಕ್ಷ.

**ವೇದಾಂತಾ ಏವ ಮೋಕ್ಷಶಾಸ್ತ್ರಾಣಿ । ತೇಷು ಬ್ರಹ್ಮಾತ್ಮಾನೌ ಉಪದಿಷ್ಟೌ । ಕಿಂತು ಸ ಉಪದೇಶೋ ದುರವಗಾಹಃ । ತಸ್ಮಾದ್ ವೇದಾಂತಾನಾಮರ್ಥಂ ನ್ಯಾಯತೋ ನಿರ್ಣೇತುಂ ತನ್ಮೂಲಕಂ ತದುಪದೇಶಂ ಗ್ರಾಹಯಿತುಂ ಮೋಕ್ಷಂ ಸುಲಭೀಕರ್ತುಂ ಚ ಇದಂ ಸೂತ್ರರೂಪಂ ವೇದಾಂತಾರ್ಥನಿರ್ಣಯಶಾಸ್ತ್ರಂ ಬಾದರಾಯಣಾಚಾರ್ಯೈಃ ಆರಭ್ಯತೇ ॥**

ವೇದಾಂತಗಳೇ (ಎಂದರೆ ಉಪನಿಷತ್ತುಗಳೇ) ಮೋಕ್ಷ ಶಾಸ್ತ್ರಗಳು. ಅವುಗಳಲ್ಲಿ ಬ್ರಹ್ಮವನ್ನು ಮತ್ತು ಆತ್ಮವನ್ನು ಕುರಿತು ಉಪದೇಶಿಸಿದೆ. ಆದರೆ ಆ ಉಪದೇಶವು ಅರ್ಥವಾಗುವುದು ಕಷ್ಟ ಆದುದರಿಂದ ಆ ವೇದಾಂತಗಳ ಅರ್ಥವನ್ನು ತರ್ಕಬದ್ಧ ವಾಗಿ ನಿರ್ಣಯಿಸಿ,ತನ್ಮೂಲಕ ಆ ಉಪದೇಶವನ್ನು (ಮುಮುಕ್ಷು ಗಳು) ಗ್ರಹಿಸುವಂತೆ ಮಾಡಿ ಮೋಕ್ಷಪ್ರಾಪ್ತಿಯನ್ನು ಸುಲಭ ಗೊಳಿಸಲು ಸೂತ್ರರೂಪದಲ್ಲಿರುವ ವೇದಾಂತದ ಅರ್ಥವನ್ನು ನಿರ್ಣಯಿಸುವ ಈ ಗ್ರಂಥವನ್ನು ಬಾದರಾಯಣಾಚಾರ್ಯರು ಪ್ರಾರಂಭಿಸಿರುತ್ತಾರೆ.

**ತತ್ರ ಸಾಧನಚತುಷ್ಟಯಸಂಪನ್ನೋ ಮುಮುಕ್ಷುಃ ತಸ್ಯ ಅಧಿಕಾರೀ । ಬ್ರಹ್ಮಾತ್ಮಭಾವಃ ವಿಷಯಃ । ಮೋಕ್ಷಃ ಪ್ರಯೋಜನಮ್। ಶಾಸ್ತ್ರಮೋಕ್ಷಯೋಃ ಸಾಧನಸಾಧ್ಯ-ಭಾವರೂಪಃ ಸಂಬಂಧಃ । ಇತ್ಯನುಬಂಧಚತುಷ್ಟಯಮ್॥**

ಅಲ್ಲಿ (ಈ ವಿಷಯದಲ್ಲಿ) ಸಾಧನಚತುಷ್ಟಯವುಳ್ಳ ಮುಮುಕ್ಷುವೇ ಅಧಿಕಾರಿ. ಬ್ರಹ್ಮವೂ ಆತ್ಮವೂ ಒಂದೇ ಎಂಬ ಅಭಿಪ್ರಾಯವೇ ವಿಷಯ. ಮೋಕ್ಷವೇ ಪ್ರಯೋಜನ. (ಈ ವೇದಾಂತ) ಶಾಸ್ತ್ರಕ್ಕೂ ಮೋಕ್ಷಕ್ಕೂ ಇರುವ ಸಂಬಂಧವು

ಎಂಥದ್ದೆಂದರೆ ಶಾಸ್ತ್ರವೆಂಬ ಸಾಧನದಿಂದ ಮೋಕ್ಷವೆಂಬುದನ್ನು ಪಡೆಯಬಹುದು. ಇದೇ (ಈ ಗ್ರಂಥದ) ಅನುಬಂಧ ಚತುಷ್ಟಯ.

**ಅಥಾತೋ ಬ್ರಹ್ಮಜಿಜ್ಞಾಸಾ ॥ ೧ ॥**

೧.ಅನಂತರ, ಆದುದರಿಂದ, ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು.

**ಇದಮ್ ಆದಿಮಂ ಸೂತ್ರಮ್ । ಅತ್ರ ಅಥ ಶಬ್ದಃ ಆನಂತರ್ಯಾರ್ಥಃ। ಸ ವಿವೇಕವೈರಾಗ್ಯಾದಿಸಾಧನ-ಚತುಷ್ಟಯಸಂಪತ್ತೇಃ ಆನಂತರ್ಯಂ ಬ್ರಹ್ಮಜಿಜ್ಞಾಸಾಯಾಃ ಸೂಚಯತಿ ॥**

ಇದು ಮೊದಲನೆಯ ಸೂತ್ರ, ಇಲ್ಲಿ 'ಅಥ' ಎಂಬ ಪದವನ್ನು 'ಅನಂತರ' ಎಂಬರ್ಥದಲ್ಲಿ ಪ್ರಯೋಗಿಸಿದೆ. ಅದು ವಿವೇಕ, ವೈರಾಗ್ಯ ಮೊದಲಾದ ನಾಲ್ಕು ಸಾಧನಗಳನ್ನು ಪಡೆದುಕೊಂಡನಂತರ ಬ್ರಹ್ಮಜಿಜ್ಞಾಸೆಯನ್ನು (ಮಾಡಬೇಕು) ಎಂಬುದನ್ನು ಸೂಚಿಸುತ್ತದೆ.

**ಅತಶ್ಶಬ್ದೋ ಹೇತ್ವರ್ಥಃ । ಯಜ್ಞಾದಿ ವೈದಿಕಕರ್ಮಾಣಿ ಕೇವಲಾಭ್ಯುದಯಸಾಧನಾನಿ ನ ತು ನಿಶ್ರೇಯಸಸಾಧನಾನಿ ಇತಿ ಜ್ಞಾತ್ವಾ ಇತಿ ತಸ್ಯಾರ್ಥಃ ॥**

**ಅತಃ** (=ಆದುದರಿಂದ) ಎಂಬ ಪದವು ಕಾರಣವೆಂಬರ್ಥದಲ್ಲಿ ಬಂದಿದೆ. ಯಜ್ಞವೇ ಮೊದಲಾದ ವೈದಿಕ ಕರ್ಮಗಳು ಕೇವಲ (ಪ್ರಾಪಂಚಿಕ) ಅಭ್ಯುದಯವನ್ನು ಸಾಧಿಸಿ ಕೊಡುತ್ತವೆಯೇ ಹೊರತು ನಿಶ್ರೇಯಸ್ಸಿಗೆ (ಮೋಕ್ಷಕ್ಕೆ) ಸಾಧನಗಳಲ್ಲ ಎಂದು ತಿಳಿದುಕೊಂಡು ಎಂದು ಅದರ ಅರ್ಥ.

**ಜ್ಞಾತುಮ್ ಇಚ್ಛಾ ಜಿಜ್ಞಾಸಾ । ಬ್ರಹ್ಮಣೋ ಜಿಜ್ಞಾಸಾ ಬ್ರಹ್ಮಜಿಜ್ಞಾಸಾ ॥**

ಜಿಜ್ಞಾಸೆ ಎಂದರೆ ಅರಿಯುವ ಇಚ್ಛೆ. ಬ್ರಹ್ಮವನ್ನು ಅರಿಯುವ ಇಚ್ಛೆಯೇ ಬ್ರಹ್ಮಜಿಜ್ಞಾಸೆ.

**ಸಾಧನಚತುಷ್ಟಯಸಂಪನ್ನಃ ಪುರುಷಃ ನಿಶ್ರೇಯಸ-ಅಸಾಧನಾನಿ ಕೇವಲಕರ್ಮಾಣಿ ತ್ಯಕ್ತ್ವಾ ಪರಂ ಬ್ರಹ್ಮ ಜ್ಞಾತುಮ್ ಉತ್ಸಹೇದಿತಿ ಸೂತ್ರಾರ್ಥಃ ॥**

ಸಾಧನಚತುಷ್ಟಯವನ್ನು ಹೊಂದಿರುವ ಪುರುಷನು (ಸಾಧಕನು) ನಿಶ್ರೇಯಸ್ಸಿಗೆ (ಎಂದರೆ ಮೋಕ್ಷಕ್ಕೆ) ಸಾಧನವಲ್ಲದಿರುವ ಕೇವಲ (ವೈದಿಕಾದಿ) ಕರ್ಮಗಳನ್ನು ತ್ಯಜಿಸಿ ಪರಬ್ರಹ್ಮವನ್ನು ಅರಿಯಲು ಉತ್ಸಾಹದಿಂದ ಪ್ರಯತ್ನಿಸಬೇಕು ಎಂಬುದು ಸೂತ್ರಾರ್ಥ.

## ೨. ಜನ್ಮಾದ್ಯಧಿಕರಣಮ್

**ಜನ್ಮಾದ್ಯಸ್ಯ ಯತಃ ॥ ೨ ॥**

೨. ಈ (ಜಗತ್ತಿನ) ಸೃಷ್ಟಿ ಮೊದಲಾದುವು ಯಾವುದರಿಂದ (ಆಗುವುವೋ ಅದೇ ಬ್ರಹ್ಮ).

**ಇದಾನೀಂ ಜಿಜ್ಞಾಸ್ಯ ಬ್ರಹ್ಮಣಃ ಸ್ವರೂಪಂ ವರ್ಣಯಂತಿ ಆಚಾರ್ಯಾಃ । ಯಸ್ಯ ಆದಿಃ ಜನ್ಮ ಭವತಿ ತಜ್ಜನ್ಮಾದಿ। ಜನ್ಮಸ್ಥಿತಿಭಂಗಂ ಸಮಾಸಾರ್ಥಃ । ಜನ್ಮಸ್ಥಿತಿಭಂಗಾ ಇತಿ ಯಾವತ್ । ಅಸ್ಯ ಏತಸ್ಯ ವಿಚಿತ್ರಜಗತೋ ಜನ್ಮಕ್ಷೇಮ-ಭಂಗಾ ಯತೋ ಯಸ್ಮಾತ್ ಸರ್ವಜ್ಞಾತ್ ಸರ್ವಶಕ್ತೇಃ ಕಾರಣವಸ್ತುನಃ ಭವಂತಿ ತದೇವ ಬ್ರಹ್ಮ, ತದೇವ ಜಿಜ್ಞಾಸಿತವ್ಯಮಿತಿ ಸೂತ್ರಾಭಿಪ್ರಾಯಃ ॥**

ಈಗ ಯಾವ ಬ್ರಹ್ಮವನ್ನು ಕುರಿತು ಅರಿಯಲು ಇಚ್ಛಿಸಬೇಕೋ ಆ ಬ್ರಹ್ಮದ ಸ್ವರೂಪವನ್ನು ಆಚಾರ್ಯರು (ಬಾದರಾಯಣರು) ವರ್ಣಿಸುತ್ತಿದ್ದಾರೆ. ಯಾವುದಕ್ಕೆ (ಎಂದರೆ ಜಗತ್ತಿಗೆ) ಆದಿ ಅಥವಾ ಜನ್ಮವುಂಟೋ ಅದು ಜನ್ಮಾದಿ, ಸೃಷ್ಟಿ, ಸ್ಥಿತಿ, ಪ್ರಲಯ ಎಂಬುದು ಒಟ್ಟರ್ಥ. ಸೃಷ್ಟಿ-ಸ್ಥಿತಿ-ಪ್ರಲಯಗಳು ಎಂದಭಿಪ್ರಾಯ. ಈ ವೈಚಿತ್ರ್ಯಪೂರ್ಣ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಲಯಗಳು ಯಾವ ಸರ್ವಜ್ಞವೂ ಸರ್ವಶಕ್ತವೂ ಆದ (ಮೂಲ) ಕಾರಣ ವಸ್ತುವಿನಿಂದ ಆಗುತ್ತವೆಯೋ ಅದೇ ಬ್ರಹ್ಮ, ಆ ಬ್ರಹ್ಮವನ್ನೇ ಅರಿಯಲು ಇಚ್ಛಿಸಬೇಕು ಎಂಬುದು ಸೂತ್ರದ ಅಭಿಪ್ರಾಯ.

(ಮುಂದುವರಿಯುವುದು)

**ಮಾನವನು ಮಾಡುವ ಆರು ಪ್ರಮುಖ ತಪ್ಪುಗಳು**

**ಮೊದಲ ತಪ್ಪು :** ಇತರರನ್ನು ತುಳಿದು ತಾನು ವೈಯಕ್ತಿಕ ಲಾಭ ಗಳಿಸಬಹುದೆಂದು ಭ್ರಮಿಸುವುದು.

**ಎರಡನೆಯ ತಪ್ಪು:** ತಿದ್ದಲು ಸಾಧ್ಯವಿಲ್ಲದ, ಬದಲಾಯಿಸಲಾಗದ ವಿಚಾರಗಳ ಬಗ್ಗೆ ವೃಥಾ ಚಿಂತಿಸುವುದು.

**ಮೂರನೆಯ ತಪ್ಪು:** :ತನಗೆ ಮಾಡಲು ಆಗದೇ ಇರುವುದನ್ನು ಅಸಾಧ್ಯವಾದುದೆಂದೇ ಸಾಧಿಸುವುದು.

**ನಾಲ್ಕನೆಯ ತಪ್ಪು:** ಕ್ಷುಲ್ಲಕವಾದ ಪಕ್ಷಪಾತಗಳನ್ನು ಕೈಬಿಡಲು ನಿರಾಕರಿಸುವುದು.

**ಐದನೆಯ ತಪ್ಪು:** ಮನಸ್ಸನ್ನು ಉತ್ತಮಗೊಳಿಸುವ ಸಂಸ್ಕೃತಿಯನ್ನು ಸಂಪಾದಿಸದೆ ನಿರ್ಲಕ್ಷ್ಯ ತಾಳುವುದು, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳದೆ ಇರುವುದು.

**ಆರನೆಯ ತಪ್ಪು:** ತನ್ನ ಬದುಕಿನಂತೆ, ನಂಬಿಕೆಯಂತೆ ಬಾಳಬೇಕೆಂದು ಇತರರನ್ನು ಒತ್ತಾಯಿಸುವುದು, ತನ್ನದೇ ಸರಿಯೆಂಬ ಹಟಮಾರಿ ಧೋರಣೆ ಹೊಂದಿರುವುದು. **—೨೦೦೦ ವರ್ಷಗಳ ಹಿಂದೆ ರೋಮಿನ ತತ್ತ್ವಜ್ಞಾನಿ ಸಿಸೆರೋ ಬರೆದಿಟ್ಟ ಪಟ್ಟಿ.**